ದಿನಾಂಕ 30-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಎದುರುಗಾರರ ಪರ ಶ್ರೀ ಸಿ.ಪಿ.ಜೆ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳನ್ನು ನಾನೇ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

**<u>ಪಾಟೀ ಸವಾಲು: ಅರ್ಜಿದಾರಳ ಪರ ಶ್ರೀ ಆರ್.ಬಿ.ಕೆ ವಕೀಲರಿಂದ:</u>**

1. ಅರ್ಜಿದಾರಳು ಎದುರುಗಾರನನ್ನು ಮದುವೆ ಆದ ದಿನದಿಂದ 08 ದಿನಗಳ ನಂತರ ಬಾಳುವೆ ಮಾಡಲು ಗಂಡನ ಮನೆಗೆ ಹೋಗಿರುತ್ತಾಳೆ. ಅರ್ಜಿದಾರಳು ಗಂಡನ ಮನೆಗೆ ಹೋದ ನಂತರ 3 ತಿಂಗಳವರೆಗೆ ಅಲ್ಲಿಯೇ ಎದುರುಗಾರನೊಂದಿಗೆ ಸಾಂಸಾರಿಕ ಜೀವನ ಮಾಡಿದ್ದಳು ಎಂದರೆ ಸಾಕ್ಷಿಯು ಕೇವಲ 15 ದಿನಗಳವರೆಗೆ ಮಾತ್ರ ಇದ್ದಳು ಎಂದು ನುಡಿಯುತ್ತಾರೆ. ನಾನು ಮತ್ತು ಎದುರುಗಾರರು ಸಂಬಂಧಿಕರು ಎಂದರೆ ಸರಿಯಲ್ಲ. ಒಂದೇ ಜನಾಂಗದವರು ಎಂದರೆ ಸರಿ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಅರ್ಜಿದಾರಳು ಎದುರುಗಾರನೊಂದಿಗೆ 8 ದಿನಗಳವರೆಗೆ ಮಾತ್ರ ಆತನ ಮನೆಯಲ್ಲಿ ಇದ್ದಳು ಎಂದು ಸುಳ್ಳಿನಿಂದ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರಳ ಮತ್ತು ಎದುರುಗಾರನ ಮದುವೆ ಮಾತುಕತೆಯಲ್ಲಿ ಮತ್ತು ಅವರ ಮದುವೆಯಲ್ಲಿ ಭಾಗವಹಿಸಿದ್ದೆ ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳಿನಿಂದ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುಗಾರನು ಅರ್ಜಿದಾರಳೊಂದಿಗೆ

ಸಾಂಸಾರಿಕ ಜೀವನ ನಡೆಸಲು ತಯಾರು ಇದ್ದರೂ ಆಕೆಯೇ ಈತನೊಂದಿಗೆ ಇರಲು ಬಯಸಿರುವುದಿಲ್ಲ ಎಂದು ಸುಳ್ಳಿನಿಂದ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

2. ಅರ್ಜಿದಾರಳು ಎದುರುಗಾರನಿಂದ ರೂ.1,00,000/- ಹಣವನ್ನು ಪರಿಹಾರ ಕೋರಿ ಸಲ್ಲಿಸಿರುತ್ತಾಳೆ ಎಂದು ನನಗೆ ತಿಳಿಸಿರುತ್ತಾರೆ. ಅರ್ಜಿದಾರಳ ಮೇಲೆ ಇತರರು ಯಾವ ಪ್ರಕರಣಗಳನ್ನು ದಾಖಲಿಸಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ಅರ್ಜಿದಾರಳು ಎದುರುಗಾರನು ಮತ್ತು ಆತನ ಕುಟುಂಬದವರನ್ನು ಹೆದರಿಸುವ ಉದ್ದೇಶಕ್ಕೆ ನಿದ್ದೆ ಮಾತ್ರೆಗಳನ್ನು ತೆಗೆದುಕೊಂಡಿದ್ದಳು ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಸದರಿ ಸಂಗತಿಗಳ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸು ಹೋಗಿರುತ್ತಾರೆ ಎಂದು ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನನಗೂ ಮತ್ತು ಅರ್ಜಿದಾರಳ ಕುಟುಂಬದವರ ನಡುವೆ ವೈಮನಸ್ಸು ಇರುವುದರಿಂದ ಎದುರುಗಾರನ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುಗಾರನು ತನ್ನ ತಂದೆ, ತಾಯಿ ಮತ್ತು ಸಹೋದರಿಯರ ಮಾತನ್ನು ಕೇಳಿ ಅರ್ಜಿದಾರಳನ್ನು ಮನೆಯಿಂದ ಹೊರ ಹಾಕಿರುವ ಸಂಗತಿಯು ನನಗೆ ಚೆನ್ನಾಗಿ ತಿಳಿದಿರುತ್ತದೆ ಎಂದರೆ ಸರಿಯಲ್ಲ.

3. ಎದುರುಗಾರನು ಕೂಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ಎದುರುಗಾರನು ಪ್ರತೀ ದಿನ ರೂ.500/- ಕೂಲಿ ಹಣವನ್ನು ಸಂಪಾದಿಸುತ್ತಾನೆ ಎಂದರೆ ಸಾಕ್ಷಿಯು ಒಂದು ದಿನ ರೂ.1000/- ಕೂಲಿ ಮತ್ತೊಂದು ದಿನ ರೂ.500/- ಕೂಲಿ ಅಥವಾ ಇನ್ನೊಂದು ದಿನ ರೂ.200/- ಕೂಲಿ ಬರುತ್ತದೆ ಎಂದು ನುಡಿಯುತ್ತಾರೆ. ಎದುರುಗಾರನಿಗೆ ಸುಮಾರು 1 ಎಕರೆ 20 ಗುಂಟೆ ಜಮೀನು ಇದ್ದು ಅದರಿಂದ ಸಾಕಷ್ಟು ಆದಾಯ ಇದೆ ಎಂದರೆ ಗೊತ್ತಿಲ್ಲ. ಎದುರುಗಾರನ ತಪ್ಪು ಇದ್ದರೂ ಆತನ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ